# ಬೆಂಗಳೂರಿನಲ್ಲಿ 'ಪಿಯರ್‌ಸನ್‌ಸಿಟಿ–ವೈಡ್‌ಕ್ವಿಜ್'ನಲ್ಲಿ ವಿಜೇತರಾಗಿ ಕಿರೀಟ ಧರಿಸಿದ ಫ್ರೀಡಮ್ ಇಂಟರ್‌ನ್ಯಾಷನಲ್ ಸ್ಕೂಲ್




ಬೆಂಗಳೂರು : ತತ್ವ ಶಾಲೆಯಲ್ಲಿ ನಡೆದ'ಪಿಯರ್‌ಸನ್‌ಸಿಟಿ–ವೈಡ್‌ಕ್ವಿಜ್' ನಗರವ್ಯಾಪಿ ರಸಪ್ರಶ್ನೆ ಸ್ಪರ್ಧೆಯನ್ನು ಫ್ರೀಡಮ್‌ಇಂಟರ್‌ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿಗಳು ಗೆದ್ದುಕೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಮತ್ತು ಜ್ಞಾನ ಅರಸುವಕಾರ್ಯದಲ್ಲಿ ತೊಡಗಲು ಅವಕಾಶವನ್ನು ಪೂರೈಸುವ ಉದ್ದೇಶವನ್ನು ಈ ಸ್ಪರ್ಧೆ ಹೊಂದಿತ್ತು. ಪಿಯರ್‌ಸನ್ ಇಂಡಿಯಾದಿಂದ ನಿರ್ವಹಿಸಲಾಗುತ್ತಿರುವ ಪಿಯರ್‌ಸನ್ ಸ್ಕೂಲ್ಸ್ ಸತತವ ರಡನೇ ವರ್ಷ ನಗರವ್ಯಾಪಿ ಅಂತರಶಾಲಾ ರಸಪ್ರಶ್ನೆ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಆಯೋಜಿಸಿತ್ತು. 5ರಿಂದ 8ನೇ ತರಗತಿಗಳ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ ಈ ಸ್ಪರ್ಧೆಗೆ ನೆಕ್ಸಸ್‌ಕನ್ಸಲ್ಟಿಂಗ್‌ರಸಪ್ರಶ್ನೆ ಪ್ರಾಯೋಜಕರಾಗಿದ್ದರು.

ಕಠಿಣ ಸ್ಪರ್ಧೆಯ ನಂತರ ಫ್ರೀಡಮ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿಗಳಾದ ಸ್ನೇಹ್ ಕೆ.ಲಹುರಿಕ ಮತ್ತು ಅಭಯ್ ಬೆಸ್ತ್ರಪಲ್ಲಿ ಅವರು ವಿಜೇತರಾಗಿ ಹೊರಹೊಮ್ಮಿದರು.ಎಚ್‌ಎಸ್‌ಆರ್ ಲೇಔಟ್ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಆದಿತ್ಯಕಿಶೋರ್ ಮತ್ತು ಕಾರ್ತಿಕ್ ಎಸ್.ಮೊದಲ ರನ್ನರ್ ಅಪ್‌ಗಳಾದರೆ, ಇಂದಿರಾ ನಗರದ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿಗಳಾದ ಅಗಸ್ತ್ಯಎಸ್. ಮತ್ತು ಮ್ಯಾಥ್ಯೂಜಾರ್ಜ್ ಅವರು ಎರಡನೇ ರನ್ನರ್‌ಅಪ್ ಆಗಿದ್ದರು.

ವಿದ್ಯಾರ್ಥಿ ಸಮುದಾಯದಿಂದ ಈ ರಸಪ್ರಶ್ನೆ ಅಪಾರ ಪ್ರತಿಕ್ರಿಯೆ ಸ್ವೀಕರಿಸಿತಲ್ಲದೇ 17 ಶಾಲೆಗಳ 127 ತಂಡಗಳ ಭಾಗವಹಿಸುವಿಕೆ ಕಂಡು ಬಂದಿತು. ವಿಜೇತರು ಉತ್ತೇಜಕರ ಪ್ರಶಸ್ತಿಗಳು ಮತ್ತು ಭಾಗವಹಿಸುವಿಕೆಯ ಪ್ರಮಾಣ ಪತ್ರವನ್ನು ಸ್ವೀಕರಿಸಿದರು.

ನ್ಯಾಷನಲ್‌ಕ್ವಿಜ್‌ಕುರಿತು ಪಿಯರ್‌ಸನ್ ಇಂಡಿಯಾದ ಶಾಲೆಗಳ ನಿರ್ವಹಣೆ ಮತ್ತು ಅರ್ಹತೆಗಳ ವಿಭಾಗದ ಉಪಾಧ್ಯಕ್ಷ ಹರೀಶ್‌ದೊರೈಸ್ವಾಮಿ ಮಾತನಾಡಿ, ತಮ್ಮಉತ್ಸಾಹವನ್ನು ಪ್ರದರ್ಶಿಸಲು ವಿದ್ಯಾರ್ಥಿಗಳಿಗೆ ಪಿಯರ್‌ಸನ್‌ಒಂದು ವೇದಿಕೆಯನ್ನು ಪೂರೈಸಿತು.ತರಗತಿಗಳಲ್ಲಿ ನೀಡುವ ಶಿಕ್ಷಣವನ್ನು ಮೀರಿ ಮತ್ತಷ್ಟುಎತ್ತರಕ್ಕೆ ಹೋಗಿ ದೀರ್ಘಕಾಲ ಉಳಿಯುವ ಅನುಭವಗಳನ್ನು ಸಂಪಾದಿಸಲು ನಾವು ವಿದ್ಯಾರ್ಥಿಗಳನ್ನು ಯಾವಾಗಲೂ ಪ್ರೋತ್ಸಾಹಿಸಿದ್ದೇವು. ವಿದ್ಯಾರ್ಥಿಗಳಿಂದಅಪಾರ ಪ್ರತಿಕ್ರಿಯೆಯನ್ನು ನಾವು ಸ್ವೀಕರಿಸುತ್ತಿದ್ದು, ಸ್ಪರ್ಧೆಗೆ ಸಂಪೂರ್ಣ ಬೆಂಬಲ ನೀಡಿದಎಲ್ಲ ಶಾಲೆಗಳಿಗೆ ಧನ್ಯವಾದ ಹೇಳಲಿಚ್ಛಿಸುತ್ತೇನೆ ಎಂದರು.

5ರಿಂದ 8ನೇ ತರಗತಿಗಳ ಶಾಲಾ ಪಠ್ಯಕ್ರಮದಎಲ್ಲ ವಿಭಾಗಗಳಲ್ಲದೇ ಪ್ರಸಕ್ತ ವಿದ್ಯಮಾನ, ಕ್ರೀಡೆ ಮತ್ತುಜನಪ್ರಿಯ ಸಂಸ್ಕೃತಿಗಳನ್ನು ಒಳಗೊಂಡ ಪ್ರಶ್ನೆಗಳನ್ನು ಈ ರಸಪ್ರಶ್ನೆಕಾರ್ಯಕ್ರಮ ಒಳಗೊಂಡಿತ್ತು.ವಿದ್ಯಾರ್ಥಿಗಳಜ್ಞಾನವನ್ನು ಪರೀಕ್ಷಿಸುವುದು ಮಾತ್ರವಲ್ಲದೇ ನಾಜೂಕಿನತಂಡದ ತಂತ್ರಗಳನ್ನು ಅನ್ವಯಿಸಬೇಕಾದಂಥರೀತಿಯಲ್ಲಿರಸಪ್ರಶ್ನೆಯನ್ನುರಚಿಸಲಾಗಿತ್ತು. ತಂಡದ ಸ್ಪೂರ್ತಿಯನ್ನು ಉಳಿಸಿಬೆಳೆಸಿಕೊಳ್ಳುವುದರ ಮತ್ತುಆರೋಗ್ಯಕರ ಸ್ಪರ್ಧೆಯಲ್ಲಿ ತೊಡಗುವುದರ ಪ್ರಾಮುಖ್ಯತೆಯನ್ನು ಕಲಿಯಲು ಅನನ್ಯವೇದಿಕೆಯನ್ನು ರಸಪ್ರಶ್ನೆ ಸೃಷ್ಟಿಸಿತ್ತು.

ಪಿಯರ್‌ಸನ್ ಸ್ಕೂಲ್ಸ್‌ಕುರಿತು

ಪಿಯರ್‌ಸನ್ ಸ್ಕೂಲ್ಸ್ ವಿಶ್ವದ ಮುಂಚೂಣಿಯ ಶೈಕ್ಷಣಿಕ ಸಂಸ್ಥೆ ಪಿಯರ್‌ಸನ್ ಸಂಸ್ಥೆಯ ಭಾಗವಾಗಿದೆ.ದೇಶದಲ್ಲಿ 18 ನಗರಗಳಲ್ಲಿ 21,000ಕ್ಕೂ ಹೆಚ್ಚಿನ ವಿದ್ಯಾರ್ಥಿಗಳನ್ನು ಸಂಸ್ಥೆ ಹೊಂದಿದೆ. ಸಮಗ್ರಅಭಿವೃದ್ಧಿಯೊಂದಿಗೆತಮ್ಮ ಪಾಂಡಿತ್ಯದ ಸಾಧನೆಯಿಂದ ಸಮುದಾಯವನ್ನು ವಿಸ್ತರಿಸುವ ಹಾಗೂ ಭವಿಷ್ಯದ ಸವಾಲುಗಳಿಗೆ ಸಿದ್ಧರಾಗಿರುವ ಜಾಗತಿಕ ಯುವಜನತೆಯನ್ನು ಸೃಷ್ಟಿಸುವ ದೃಷ್ಟಿಕೋನದೊಂದಿಗೆ ಭಾರತದಲ್ಲಿ ಶಾಲಾ ನಿರ್ವಹಣಾ ಸೇವೆಗಳನ್ನು ಪಿಯರ್‌ಸನ್ ಸ್ಕೂಲ್ಸ್ ಸಾದರಪಡಿಸುತ್ತಿದೆ.

ಶೈಕ್ಷಣಿಕಉತ್ಕೃಷ್ಟತೆಯಜೊತೆಗೆ ಈ ಶಾಲೆಗಳು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಮನಾದಗಮನವನ್ನು ನೀಡುತ್ತಿವೆ. ಪಿಯರ್‌ಸನ್ ಸ್ಕೂಲ್ಸ್ ಅತ್ಯುತ್ತಮ ಶೈಕ್ಷಣಿಕ ಮಟ್ಟವನ್ನು ಪೂರೈಸುತ್ತಿದ್ದುಅಂತಾರಾಷ್ಟ್ರೀಯ ಬೋಧನಾ ಕ್ರಮಗಳು, ಅರ್ಹತೆ ಪಡೆದತರಬೇತಿ ಹೊಂದಿದ ಬೋಧನಾ ಸಿಬ್ಬಂದಿ ಬಹು ಮಾಧ್ಯಮ ಆಧರಿಸಿದ ಸಂವಾದಯುತ ವಸ್ತುವಿಷಯ ಮತ್ತುಇನ್ನೂ ಹೆಚ್ಚಿನದನ್ನು ಸಾದರಪಡಿಸುತ್ತಿವೆ. ಇದರೊಂದಿಗೆ ಮೋಜಿನಕಲಿಕೆಯ ವಾತಾವರಣವನ್ನು ನೀಡುತ್ತಿದ್ದು ಪ್ರತಿ ವಿದ್ಯಾರ್ಥಿಗೆ ನವೀನತೆಯ, ಸವಾಲಿನ ಮತ್ತು ಉದ್ಯಮಶೀಲತೆಯ ಅನುಭವ ನೀಡುತ್ತಿವೆ. ಪಿಯರ್‌ಸನ್ ಸ್ಕೂಲ್ಸ್ ನಿರ್ವಹಿಸುವ ಶಾಲೆಗಳು ಶೈಕ್ಷಣಿಕ ಉತ್ಕೃಷ್ಟತೆಯೊಂದಿಗೆಅತ್ಯುತ್ತಮ ಮೂಲ ಸೌಕರ್ಯಗಳ ನಿರ್ವಹಣೆ, ಕಾರ್ಯಾಚರಣೆ ಹೊಂದಿವೆ.ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕೌಶಲ್ಯಗಳಲ್ಲಿ ಉತ್ಕೃಷ್ಟತೆ ಸಾಧಿಸಲುಅಪಾರ ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಪೂರೈಸುತ್ತಿವೆ.